# ದಿ. (ಸೌ.) ಸುಜಾತಾ ಕುಲಕರ್ಣಿಯವರ ಮೃತ್ಯುತ್ತರ ವಿಧಿಗಳ ಹಿಂದಿನ ಅಧ್ಯಾತ್ಮಶಾಸ್ತ್ರ

## ಗ್ರಂಥದ ಅನುಕ್ರಮಣಿಕೆ


| | | |
|---|---|---|
| ಅಧ್ಯಾಯ ೧ : | ಸೌ. ಕುಲಕರ್ಣಿ ಇವರ ಮೃತ್ಯುವಿನ ನಂತರ ಕುಟುಂಬದವರ, ಪಾರ್ಥಿವದ (ಮೃತ್ಯುವಿನ ನಂತರ ಆ ಜೀವಕ್ಕೆ ಪಿತೃಪದವಿ ಪ್ರಾಪ್ತವಾಗುವ ತನಕದ ಸ್ಥಿತಿ) ಮತ್ತು ವಾತಾವರಣದ ಸಂದರ್ಭದಲ್ಲಿ ಅರಿವಾದ ವೈಶಿಷ್ಟ್ಯಗಳು | ೧೧ |
| ಅಧ್ಯಾಯ ೨ : | ಸೌ. ಕುಲಕರ್ಣಿಯವರ ಮೃತ್ಯುವಿನ ದಿನದಂದು ಅಂತ್ಯವಿಧಿಗಳ ಸಂದರ್ಭದಲ್ಲಿ ಬಂದ ಅನುಭೂತಿಗಳು | ೨೦ |
| ಅಧ್ಯಾಯ ೩ : | ಸೌ. ಕುಲಕರ್ಣಿಯವರ ಅಗ್ನಿಸಂಸ್ಕಾರದ ಸಮಯದಲ್ಲಿ ಮಾಡಿದ ಸೂಕ್ಷ್ಮದಲ್ಲಿನ ಪರೀಕ್ಷಣೆ | ೨೬ |
| ಅಧ್ಯಾಯ ೪ : | ಸೌ. ಕುಲಕರ್ಣಿಯವರ ಮೃತ್ಯುವಿನ ನಂತರದ ವಿಧಿಗಳನ್ನು ಮಾಡುವಾಗ ಅವರ ಮಗಳು ಕು. ತೃಪ್ತಿ ಮತ್ತು ಪುರೋಹಿತ ಸಾಧಕರಿಗೆ ಆದ ತೊಂದರೆಗಳು ಮತ್ತು ಬಂದ ಅನುಭೂತಿಗಳು | ೨೮ |
| ಅಧ್ಯಾಯ ೫ : | ಅಮ್ಮನ ಅನಾರೋಗ್ಯದ ಸಮಯದಲ್ಲಿ ಸಾಧಕಿಯರು ಮಾಡಿದ ಸೇವೆಯಿಂದ ‘ಸನಾತನವು ನಮ್ಮ ಕುಟುಂಬವಾಗಿದೆ’ ಎಂಬ ಪರಾತ್ಪರ ಗುರು ಡಾಕ್ಟರರ ಉದ್ಗಾರವು ಸಾರ್ಥಕವಾದುದರ ಬಗ್ಗೆ ಸಾಧಕಿಗೆ ಬಂದ ಅನುಭವ ! | ೩೪ |
| ಅಧ್ಯಾಯ ೬ : | ಸೌ. ಕುಲಕರ್ಣಿಯವರ ಸೇವೆಯಲ್ಲಿದ್ದ ಸಾಧಕಿಯರ ಮನಸ್ಸಿನ ವಿಚಾರಪ್ರಕ್ರಿಯೆ | ೪೬ |
| ಅಧ್ಯಾಯ ೭ : | ಸೌ. ಕುಲಕರ್ಣಿಯವರ ಕುರಿತು ಸಾಧಕರು ಹೇಳಿದ ಗುಣವೈಶಿಷ್ಟ್ಯಗಳು | ೫೮ |

ಅಧ್ಯಾಯ ೮ : ಕುಲಕರ್ಣಿ ಕುಟುಂಬದವರಿಂದ ಸಾಧಕರಿಗೆ ಕಲಿಯಲು ಸಿಕ್ಕಿದ ಅಂಶಗಳು ೯೩

ಅಧ್ಯಾಯ ೯ : 'ಸೌ. ಸುಜಾತಾ ಕುಲಕರ್ಣಿಯವರ ಮೃತ್ಯುವಿನ ನಂತರ ದೈನಿಕ 'ಸನಾತನ ಪ್ರಭಾತ'ದಲ್ಲಿ ಪ್ರಸಿದ್ಧವಾಗುವ ಲೇಖನಮಾಲಿಕೆಗೆ ಪರಾತ್ಪರ ಗುರು ಡಾ. ಆಠವಲೆಯವರು ಬರೆದ ವಿವಿಧ ಚೌಕಟ್ಟುಗಳು ಮತ್ತು ಅವುಗಳನ್ನು ಓದಿ ಸಾಧಕರು ಮಾಡಿದ ಪ್ರಶಂಸೆಗಳು', ಇವುಗಳ ಬಗ್ಗೆ ಕು. ತೃಪ್ತಿ ಕುಲಕರ್ಣಿಯ ವಿಚಾರಪ್ರಕ್ರಿಯೆ ೯೭

ಅಧ್ಯಾಯ ೧೦ : ಸಾಧಕಿಯ ಮನಸ್ಸಿನಲ್ಲಿ ಭವಿಷ್ಯಕಾಲದ ಸಂದರ್ಭದಲ್ಲಿನ ಚಿಂತೆಯ ವಿಚಾರ ಬರುತ್ತಿರುವಾಗ ದೇವರು 'ಪರಾತ್ಪರ ಗುರು ಡಾಕ್ಟರರು ನಿನ್ನನ್ನು ತುಂಬಾ ಮೇಲೆ ಒಯ್ದಿಟ್ಟಿದ್ದಾರೆ' ಎಂದು ಹೇಳಿ ಚಿಂತೆ ಮಾಡದಿರುವಂತೆ ಹೇಳುವುದು ಮತ್ತು ಅವಳ ತಾಯಿಯ ಮೃತ್ಯು ನಂತರ ಘಟಿಸಿದ ಘಟನೆಗಳ ನಂತರ ೧ ತಿಂಗಳಲ್ಲಿ ದೇವರು ಈ ವಾಕ್ಯವನ್ನು ನೆನಪಿಸುವುದು ೧೦೨

卐 **ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ** ೧೦೬

**ಗ್ರಂಥದ ಮುಖಪುಟದ ಮೇಲಿರುವ ಚಿತ್ರದ ಬಗ್ಗೆ ವಿವರಣೆ**

'ಸ್ತ್ರೀಯರು ಸ್ಮಶಾನಕ್ಕೆ ಹೋಗಬೇಕಾದ ಸಂದರ್ಭ ಬಂದರೆ ಅವರು ಕೂದಲನ್ನು ಮುಕ್ತವಾಗಿ ಬಿಡಬೇಕು ಮತ್ತು ಶ್ವೇತ ವಸ್ತ್ರ ಧರಿಸಬೇಕು.' (ಆಧಾರ : ಧರ್ಮಸಿಂಧು, ನಿರ್ಣಯಸಿಂಧು, ಋಗ್ವೇದೀಯ ಬ್ರಹ್ಮಕರ್ಮ ಸಮುಚ್ಚಯ ಮತ್ತು ಪ್ರಯೋಗ ರತ್ನ [ನಾರಾಯಣ ಭಟ್ಟ])

**ಸನಾತನದ ಗ್ರಂಥಕಾರ್ಯದಲ್ಲಿ ಪಾಲ್ಗೊಂಡು ಸಮಷ್ಟಿ ಸಾಧನೆ ಮಾಡಿ !**

卐 ಮರಾಠಿ ಭಾಷೆಯಲ್ಲಿನ ಗ್ರಂಥಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡುವುದು

卐 ಗ್ರಂಥದ ರಚನೆಯನ್ನು 'ಇನ್‌ಡಿಸೈನ್' ಎಂಬ ಗಣಕ ತಂತ್ರಾಂಶದಲ್ಲಿ ಮಾಡುವುದು

ಗ್ರಂಥನಿರ್ಮಿತಿಯ ಕಾರ್ಯದಲ್ಲಿ ಪಾಲ್ಗೊಳ್ಳಲು ಸಂಪರ್ಕಿಸಿ !

೯೩೪೨೪ ೩೫೯೧೭ ಅಥವಾ kannada.granth@gmail.com

## ಸೌ. ಸುಜಾತಾ ಕುಲಕರ್ಣಿ ಮತ್ತು ಅವರ ಕುಟುಂಬದವರು ಸಾಧನೆ ಮಾಡುತ್ತಿರುವುದರಿಂದ ಸೌ. ಸುಜಾತಾ ಕುಲಕರ್ಣಿಯವರ ಮೃತ್ಯುನಂತರವೂ ದೇವರ ಕೃಪೆ ಅನುಭವಿಸುವ ಕುಲಕರ್ಣಿ ಕುಟುಂಬ !

'ಪ್ರತಿಯೊಬ್ಬರ ಆಯುಷ್ಯದಲ್ಲಿ 'ಯಾವುದಾದರೊಬ್ಬ ಸಮೀಪದ ವ್ಯಕ್ತಿಯ ಮೃತ್ಯುವಾಗುವ' ಘಟನೆಯು ಯಾವಾಗಲಾದರೊಮ್ಮೆ ಖಂಡಿತವಾಗಿಯೂ ಘಟಿಸುತ್ತದೆ. ಹಿಂದೆ ಅವಿಭಕ್ತ ಕುಟುಂಬಗಳಿರುತ್ತಿದ್ದವು. ಆದ್ದರಿಂದ ಕುಟುಂಬದವರಲ್ಲಿ ಯಾರಿಗಾದರೂ ಗಂಭೀರ ರೋಗಗಳಾದರೆ, ಅವರಿಗೆ ಕುಟುಂಬದ ಇತರ ಸದಸ್ಯರು ಸಹಾಯ ಮಾಡುತ್ತಿದ್ದರು. ಕುಟುಂಬದಲ್ಲಿ ಯಾರದ್ದಾದರೂ ಮೃತ್ಯುವಾದರೆ ಕುಟುಂಬದಲ್ಲಿನ ಎಲ್ಲ ಜನರು ಒಟ್ಟಿಗೆ ಸೇರಿ ಮೃತ್ಯುನಂತರದ ವಿಧಿಗಳನ್ನು ಮಾಡುತ್ತಿದ್ದರು. ಪ್ರಸ್ತುತ ಗ್ರಂಥದಲ್ಲಿ ಉಲ್ಲೇಖಿಸಿದ ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಅಂಬರನಾಥದಲ್ಲಿನ ಕುಲಕರ್ಣಿ ಕುಟುಂಬವು (ಶ್ರೀ. ದೇವದತ್ತ ಕುಲಕರ್ಣಿ, ಅವರ ಪತ್ನಿ ಸೌ. ಸುಜಾತಾ ಕುಲಕರ್ಣಿ ಮತ್ತು ಅವರ ಮಗಳು ಕು. ತೃಪ್ತಿ) ಕಳೆದ ೧೦ ವರ್ಷಗಳಿಂದ ಗೋವಾದ ರಾಮನಾಥಿಯಲ್ಲಿರುವ ಸನಾತನದ ಆಶ್ರಮದಲ್ಲಿ ಬಂದು ವಾಸ್ತವ್ಯದಲ್ಲಿದ್ದಾರೆ. ಅವರಲ್ಲಿ ಸೌ. ಸುಜಾತಾ ಕುಲಕರ್ಣಿಯವರು ವರ್ಷವಿಡೀ ಗಂಭೀರ ಅನಾರೋಗ್ಯದ ನಂತರ ೨೦.೪.೨೦೨೦ ರಂದು ಮೃತರಾದರು. ಈ ಗ್ರಂಥದಲ್ಲಿ 'ಸೌ. ಕುಲಕರ್ಣಿಯವರ ಮೃತ್ಯುವನ್ನು ಕುಲಕರ್ಣಿ ಕುಟುಂಬದವರು ಸಾಧಕರ ಸಹಾಯದಿಂದ ಹೇಗೆ ಎದುರಿಸಿದರು, ಹಾಗೆಯೇ ಕುಲಕರ್ಣಿ ಕುಟುಂಬದವರ ಸಾಧನೆ ಇರುವುದರಿಂದ ಈ ಕಾಲದಲ್ಲಿ ಅವರು ದೇವರ ಕೃಪೆಯನ್ನು ಹೇಗೆ ಅನುಭವಿಸಿದರು' ಎಂಬುದನ್ನು ನೀಡಲಾಗಿದೆ. ಸೌ. ಕುಲಕರ್ಣಿಯವರ ಮೃತ್ಯುನಂತರ, ಹಾಗೆಯೇ ಮೃತ್ಯುನಂತರದ ವಿಧಿಗಳ ಸಮಯದಲ್ಲಿ ಮಾಡಿದ ಸೂಕ್ಷ್ಮದಲ್ಲಿನ ಪರೀಕ್ಷಣೆಗಳನ್ನೂ ಗ್ರಂಥದಲ್ಲಿ ನೀಡಲಾಗಿದೆ. ಇದನ್ನು ಓದಿ ಮೃತ್ಯುನಂತರದ ಸೂಕ್ಷ್ಮದಲ್ಲಿನ ಪ್ರಕ್ರಿಯೆ ಹೇಗಿರುತ್ತದೆ ಎಂಬುದು ಗಮನಕ್ಕೆ ಬರುವುದು. 'ಸೌ. ಕುಲಕರ್ಣಿಯವರ ಸಾಧನೆ ಇರುವುದರಿಂದ ಅವರ ಮೃತ್ಯುನಂತರದ ಪ್ರವಾಸವು ಸುಖಕರವಾಯಿತು' ಎಂಬುದು ಸೂಕ್ಷ್ಮಪರೀಕ್ಷಣೆಯಲ್ಲಿನ ವಿವೇಚನೆಯಿಂದ ತಿಳಿಯುತ್ತದೆ.

'ಪ್ರತಿಯೊಬ್ಬರಿಗೂ ಮೃತ್ಯುವು ಅನಿವಾರ್ಯವಾಗಿದೆ. ಮೃತ್ಯುನಂತರದ ಪ್ರವಾಸ ಸುಖಕರವಾಗಲು ಪ್ರತಿಯೊಬ್ಬರೂ ಜೀವನದಲ್ಲಿ ಸಾಧನೆ ಮಾಡುವುದು ಆವಶ್ಯಕವಾಗಿದೆ. ಅದನ್ನು ಮಾಡುವ ಬುದ್ಧಿ ಪ್ರತಿಯೊಬ್ಬರಿಗೂ ಬರಲಿ' ಎಂದು ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಪ್ರಾರ್ಥನೆ !' – **(ಪರಾತ್ಪರ ಗುರು) ಡಾ. ಆಠವಲೆ (೨೭.೪.೨೦೨೦)**